# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 390 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ.<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕರಿಕೆ ಗ್ರಾಮದ ಸರ್ಕಾರಿ ಶಾಲೆಯ ಒಟ್ಟು ಭೂಮಿಯ ವಿಸ್ತೀರ್ಣ ಎಷ್ಟು; ಆ ಭೂಮಿಯ ಪೈಕಿ ಎಷ್ಟು ಪ್ರಮಾಣದ ಭೂಮಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ; ಒತ್ತುವರಿ ನಡೆದಿರುವುದು ಯಾವ ವರ್ಷದಿಂದ; (ಸಂಪೂರ್ಣ ವಿವರ ನೀಡುವುದು) | ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕರಿಕೆ ಗ್ರಾಮದ ಸ.ನಂ 16/1 ರಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು 8.40 ಎಕರೆ ವಿಸ್ತೀರ್ಣ ಹೊಂದಿದ್ದು, ಸದರಿ ಜಮೀನು ಕ್ಷೇತ್ರ ಶಿಕ್ಷಣಾಧಿಕಾರಿ, ಮಡಿಕೇರಿ ರವರ ಹೆಸರಿನಲ್ಲಿ ಪಹಣಿ ದಾಖಲಿರುತ್ತದೆ.<br>ಸದರಿ ಜಾಗವು ಒತ್ತುವರಿಯಾಗಿರುವ ಬಗ್ಗೆ ದಿನಾಂಕ:05.01.2026 ರ ಎಸ್.ಡಿ.ಎಂ.ಸಿ ಸಭಾ ನಡವಳಿಯಲ್ಲಿ ತಿಳಿಸಲಾಗಿರುತ್ತದೆ. |
| (ಆ) | ಒತ್ತುವರಿ ಕುರಿತು ಜಿಲ್ಲಾಡಳಿತ, ಕಂದಾಯ ಇಲಾಖೆ ಅಥವಾ ಶಿಕ್ಷಣ ಇಲಾಖೆ ಯಾವುದೇ ಜಂಟಿ ಸರ್ವೆ ನಡೆಸಿದೆಯೇ; (ನಡೆಸಿದ್ದಲ್ಲಿ ವರದಿ ನೀಡುವುದು) | ಒತ್ತುವರಿಯಾಗಿರುವ ಜಮೀನನ್ನು ಅಳತೆಯಿಂದ ಗುರುತಿಸುವ ಬಗ್ಗೆ ತಹಶೀಲ್ದಾರ್, ಮಡಿಕೇರಿ ತಾಲ್ಲೂಕು ಇವರು ದಿನಾಂಕ:22.07.2026 ರಂದು ಸರ್ವೆ ಇಲಾಖೆಗೆ ಪತ್ರ ಬರೆದಿರುತ್ತಾರೆ. ಅದರಂತೆ ದಿನಾಂಕ:18.08.2026 ರಂದು ಸರ್ವೆ, ಕಂದಾಯ, ಶಿಕ್ಷಣ ಇಲಾಖೆಗಳ ಜಂಟಿ ಅಳತೆ ಕಾರ್ಯಕ್ಕೆ ದಿನಾಂಕ ನಿಗದಿಪಡಿಸಲಾಗಿರುತ್ತದೆ. |
| (ಇ) | ತಹಶೀಲ್ದಾರ್, ಕಂದಾಯ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ತನಿಖೆ ನಡೆಸಲಾಗುವುದೇ; ಒತ್ತುವರಿದಾರರ ವಿರುದ್ಧ ಕರ್ನಾಟಕ ಸಾರ್ವಜನಿಕ ಆಸ್ತಿ ಸಂರಕ್ಷಣಾ ಕಾಯ್ದೆ ಅಥವಾ ಇತರ ಸಂಬಂಧಿತ ಕಾನೂನುಗಳಡಿ ಕ್ರಮ ಕೈಗೊಳ್ಳಲಾಗಿದೆಯೇ; | ಒತ್ತುವರಿ ಬಗ್ಗೆ ಜಂಟಿ ಅಳತೆ ಕಾರ್ಯ ನಡೆಸಿ, ಸರ್ವೆ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಬಹುದಾಗಿರುತ್ತದೆ. |
| (ಈ) | ಒತ್ತುವರಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ವಿಶೇಷ ನಿರ್ದೇಶನ ನೀಡಲಾಗುವುದೆ; ಶಾಲೆಯ ಭೂಮಿಯನ್ನು ಸಂಪೂರ್ಣವಾಗಿ ಒತ್ತುವರಿಯಿಂದ ಮುಕ್ತಗೊಳಿಸಿ ಶಾಲೆಯ ಹೆಸರಿಗೆ ಗಡಿ ಗುರುತು, ಕಾಂಪೌಂಡ್ ಹಾಗೂ ದಾಖಲೆಗಳನ್ನು ಸಂರಕ್ಷಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಿದೆ? | ಶಾಲೆಯ ಜಮೀನನ್ನು ದಿನಾಂಕ:18.08.2026 ರಂದು ಅಳತೆಯಿಂದ ಗುರುತಿಸಲು ನಿಗದಿಪಡಿಸಲಾಗಿದ್ದು, ಜಂಟಿ ಅಳತೆ ಕಾರ್ಯ ನಡೆಸಿ, ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಒತ್ತುವರಿಯಿಂದ ಮುಕ್ತ ಗೊಳಿಸಿ, ಶಾಲೆಯ ಜಾಗವನ್ನು ಶಿಕ್ಷಣ ಇಲಾಖೆಯ ಸುಪರ್ದಿಗೆ ನೀಡಲು ಕೈಗೊಳ್ಳಬಹುದಾಗಿರುತ್ತದೆ. |

(ಕಡತ ಸಂಖ್ಯೆ: ಆರ್‌ಡಿ 18 ಎಲ್‌ಜಿಜಿಒ 2026)

(ಡಾ:ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ